ಮಕ್ಕಳ ಸಾಹಿತ್ಯ ಮತ್ತು ಮಗು ಕೇಂದ್ರಿತ ಅಭ್ಯಾಸಗಳು

ವರ್ತುಲ್ ದೌಂಡಿಯಾಲ್

'ಮೇಡಮ್, ನಾನೂ ಕೂಡಾ ಬಯ್ಯಾ ಮತ್ತು ದೀದಿಯರು ಮಾಡುವ ಕೆಲಸಗಳನ್ನು ಮಾಡಬಹುದಾ?' ಎಂದು ದೀಕ್ಷಾ ಕೇಳಿದಳು. ಆಗ ಅವಳ ಶಿಕ್ಷಕಿ ಒಂದು ಹಿತವಾದ ಆಶ್ಚರ್ಯದ ಭಾವದಲ್ಲಿ ಹುಬ್ಬುಹಾರಿಸಿ ಅವಳನ್ನು ಕೇಳಿದರು, 'ಏನು ಕೆಲಸಗಳನ್ನು?' 'ಚಮಿಕ್ಷಾ', (Chamiksha) ಅವಳು ಹೇಳಿದಳು. 'ಓ! ಯಾಕೆ ಇಲ್ಲ ಖಂಡಿತವಾಗಿಯೂ, ಮಾಡಬಹುದು' ಅಂದರು ಅವರ ಶಿಕ್ಷಕಿ ಬಹಳ ಖುಷಿಯಿಂದ. ಆಗ ದೀಕ್ಷಾ ಸಂಕೋಚದಲ್ಲಿ, 'ಆಗ ನನ್ನ ವಿಡಿಯೋವನ್ನೂ ಕೂಡಾ ಕಳುಹಿಸಬಹುದಲ್ಲ?' ಎಂದು ಕೇಳಿದಳು. ಮಗುವಿನ ಆಕರ್ಷಕ ಮುಖಭಾವವನ್ನು ಕಂಡು ಶಿಕ್ಷಕಿ ನಸುನಕ್ಕರು. ಆಕೆ ಕಥೆಯೊಂದರ ಸಮೀಕ್ಷೆ ಮಾಡಿದರೆ, ಆಗ ಅವಳ ವಿಡಿಯೋವನ್ನು ಶಿಕ್ಷಕರ ಗುಂಪಿನಲ್ಲಿ ಹಂಚಿಕೊಳ್ಳುವುದಾಗಿ ಅವರು ಭರವಸೆ ಕೊಟ್ಟರು.

ದೀಕ್ಷಾ ಡೆಹ್ರಾಡೂನ್ ಜಿಲ್ಲೆಯ ವಿಕಾಸನಗರ ಬ್ಲಾಕ್‌ನ ದಂಡಾಜಂಗಲ್ ಪ್ರಾಥಮಿಕ ಶಾಲೆಯ ಒಂದನೇ ತರಗತಿಯ ವಿದ್ಯಾರ್ಥಿನಿಯಾಗಿದ್ದಾಳೆ. ಅವಳು ಜಾನ್ಸಾರಿ ಬುಡಕಟ್ಟು ಜನಾಂಗಕ್ಕೆ ಸೇರಿದ ಬಾಲಕಿಯಾಗಿದ್ದು, ಅವಳ ತಂದೆ ದಿನಗೂಲಿ ಕಾರ್ಮಿಕನಾಗಿದ್ದಾನೆ. ಈ ಸರ್ಕಾರಿ ಶಾಲೆಯ ಬಹುತೇಕ ಮಕ್ಕಳ ಸಾಮಾಜಿಕ ಆರ್ಥಿಕ ಹಿನ್ನೆಲೆ ಅಷ್ಟಕ್ಕಷ್ಟೇ ಇತ್ತು. ಅವರೆಲ್ಲಾ ಮೊದಲ ತಲೆಮಾರಿನ ಕಲಿಕಾರ್ಥಿಗಳಾಗಿದ್ದು, ಮನೆಯಲ್ಲಿ ಅವರ ಶಿಕ್ಷಣವನ್ನು ಬೆಂಬಲಿಸುವುದಕ್ಕೆ ಯಾರೂ ಇರಲಿಲ್ಲ. ಹಾಗಾಗಿ, ಅವರ ಕಲಿಕೆ ಮತ್ತು ಸಾಧನೆಗಳ ಎಲ್ಲಾ ಮನ್ನಣೆಯೂ ಅವರ ಶಿಕ್ಷಕಿಯರಿಗೇ ಸಲ್ಲಬೇಕು.

ಶಿಕ್ಷಕ/ಕಿಯರ ಪಾತ್ರ

ಸರಕಾರಿ ಶಾಲಾ ಶಿಕ್ಷಕ/ಕಿಯರ ಜೊತೆ ಕೆಲಸ ಮಾಡುತ್ತಾ, 'ಎಲ್ಲಾ ವಿದ್ಯಾರ್ಥಿಗಳೂ ಕಲಿಯುತ್ತಾರೆ ಎಂದು ನಂಬುವ ಶಿಕ್ಷಕ/ಕಿಯರು ಇದ್ದಾರೆ' ಎಂಬುದನ್ನು ನಾನು ಗಮನಿಸಿದ್ದೇನೆ. ಈ ಶಿಕ್ಷಕ/ಕಿಯರು ತಮ್ಮ ಬೋಧನಾ ವಿಧಾನಗಳಲ್ಲಿ ಸುಧಾರಣೆ ದಾಖಲಿಸಿದ್ದು, ವಿದ್ಯಾರ್ಥಿಗಳ ಆಸಕ್ತಿಯನ್ನು ಕಲಿಕೆಯಲ್ಲಿ ಹಿಡಿದಿಡುವುದಕ್ಕೆ ಅವರು ಹೊಸ ವಿಧಾನಗಳನ್ನು ಪ್ರಯತ್ನಿಸುತ್ತಾ ಇರುತ್ತಾರೆ. ಹಾಗೆಯೇ ಅವರು ತಮ್ಮ ವಿದ್ಯಾರ್ಥಿಗಳ ವಿವಿಧ ಅಗತ್ಯಗಳನ್ನೂ ಮನಸ್ಸಿನಲ್ಲಿಟ್ಟು ತಮ್ಮ ತರಗತಿ ಚಟುವಟಿಕೆಗಳನ್ನು ಅಥವಾ ಮೌಲ್ಯಮಾಪನ ಸಾಧನಗಳನ್ನು ರೂಪಿಸುತ್ತಾರೆ. ಆದರೆ ದುರದೃಷ್ಟವಶಾತ್ ಅಂತಹ ಶಿಕ್ಷಕ/ಕಿಯರ ಸಂಖ್ಯೆ ಬಹಳ ಕಡಿಮೆಯಿದೆ.

ಇನ್ನೊಂದೆಡೆ ಕೆಲವೇ ವಿದ್ಯಾರ್ಥಿಗಳು ಮಾತ್ರ ಚೆನ್ನಾಗಿ ಕಲಿಯಬಲ್ಲರು ಎಂಬ ನಂಬಿಕೆಗೆ ಜೋತುಬಿದ್ದ ಕೆಲವು ಶಿಕ್ಷಕರೂ ಇದ್ದಾರೆ. ಈ ಶಿಕ್ಷಕರು ತಮ್ಮ ಗ್ರಹಿಕೆಯನ್ನು ಅವರದೇ ಸ್ವಂತ ಬೋಧನಾ ಅನುಭವಗಳ ಆಧಾರದಲ್ಲಿ ಪ್ರತಿಪಾದಿಸುತ್ತಾರೆ. ಅಂತಹ ಶಿಕ್ಷಕರ ತರಗತಿ ಅಭ್ಯಾಸಗಳನ್ನು ಗಮನಿಸಿದರೆ ಅವರು ವಿವಿಧ ವಿಷಯಗಳ ಬೋಧನೆಗೆ ಸಾಂಪ್ರದಾಯಿಕ ವಿಧಾನಗಳನ್ನೇ ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ಅವರು ಪಠ್ಯಪುಸ್ತಕಗಳನ್ನೇ ಅವಲಂಬಿಸುತ್ತಾರೆ ಮತ್ತು ವಿದ್ಯಾರ್ಥಿಗಳ ಭಿನ್ನ ಕಲಿಕಾ ಅವಶ್ಯಕತೆಗಳನ್ನು ಬಿಟ್ಟು ಸಂಪೂರ್ಣ ತರಗತಿಗೆ ಏಕಮಾದರಿಯ ಸಾಮಾನ್ಯ ನಿರ್ದೇಶನಗಳನ್ನು ಅನುಸರಿಸುತ್ತಾರೆ.

ಕಲ್ಪನಾಶೂನ್ಯ ಬೋಧನೆ

ಪ್ರತಿ ವ್ಯಕ್ತಿಗೂ ಒಂದು ಭಿನ್ನವಾದ ಕಲಿಕಾ ಶೈಲಿ ಇದೆ ಎಂಬ ಅಂಶವನ್ನು ಅಂತಹ ತರಗತಿಗಳನ್ನು ಸಂಪೂರ್ಣವಾಗಿ ಕಡೆಗಣಿಸಿರುವುದನ್ನು ಗಮನಿಸಬಹುದು. ಅಂತಹ ಸಾಂಪ್ರದಾಯಿಕ ಸನ್ನಿವೇಶಗಳಲ್ಲಿಯೂ ಕಲಿಯಲು ಸಾಧ್ಯವಾಗುವವರು ಯಾರೆಂದರೆ ಪ್ರಧಾನವಾಗಿ ಉತ್ತಮ ಸಾಮಾಜಿಕ ಆರ್ಥಿಕ ಸ್ಥಾನಮಾನ ಉಳ್ಳವರು, ಈಗಾಗಲೇ ಒಂದಲ್ಲ ಒಂದು ಬಗೆಯ ಸಾಮಾಜಿಕ ಮತ್ತು ಶೈಕ್ಷಣಿಕ ಬಂಡವಾಳವನ್ನು ಹೊಂದಿರುವವರು, ಯಾರಾದರೂ ಒಬ್ಬ ಶಿಕ್ಷಿತನನ್ನು ಹೊಂದಿರುವ ಕುಟುಂಬದವರೇ ಆಗಿರುತ್ತಾರೆ. ಬಹುತೇಕ ಬಾರಿ ಆ ಮಕ್ಕಳು 'ನಾಗರೀಕ' (ನಗರ ಮೂಲದ) ಎಂದು ಪರಿಗಣಿತವಾದ ಭಾಷೆಯನ್ನೇ ಈಗಾಗಲೇ ಮಾತನಾಡುತ್ತಿರುತ್ತಾರೆ. ಅವರು ಅನುಸರಿಸುವ ಸಾಮಾಜಿಕ ಶಿಷ್ಟಾಚಾರಗಳು ಶಿಕ್ಷಕರಿಂದ 'ಸಭ್ಯ'ವಾದುದು ಎಂದು ಒಪ್ಪಿತವಾಗಿರುತ್ತದೆ.

ಸಾಂಪ್ರದಾಯಿಕವಾದ ವಿಧಾನವು ಗ್ರಹಿಸುವುದು ಮತ್ತು ಅರ್ಥೈಸುವುದರ ಕಡೆಗೆ ಕಡಿಮೆ ಒತ್ತು ನೀಡಿ ವಸ್ತು ವಿಷಯಗಳನ್ನು ನೆನಪಿಟ್ಟುಕೊಳ್ಳುವುದರತ್ತ ಹೆಚ್ಚಿನ ಮಹತ್ವಕೊಡುತ್ತದೆ. ಅಂತಹ ವಿಧಾನದಲ್ಲಿ ಮೌಲ್ಯಮಾಪನವು ವಿದ್ಯಾರ್ಥಿಗಳು ನೆನಪಿನಲ್ಲಿ ಇರಿಸಿಕೊಂಡ ವಿಷಯವನ್ನು ಮಾತ್ರ ಪರೀಕ್ಷೆಗೆ ಒಳಪಡಿಸುತ್ತದೆ. ಈ ಉತ್ತರಗಳು ಅಥವಾ ಸಮಸ್ಯೆ ಪರಿಹಾರದ ವಿಧಾನಗಳು ವ್ಯಕ್ತಿಗತ ಚಿಂತನೆಗೆ, ಸೃಜನಶೀಲತೆಗೆ ಮತ್ತು ಹೊಸತನಕ್ಕೆ ಅಥವಾ ನವೀನ ಪ್ರಯತ್ನಗಳಿಗೆ ಅವಕಾಶ ನೀಡುವುದಿಲ್ಲ. ಇಡೀ ವಿಧಾನವು ಪಠ್ಯಪುಸ್ತಕಗಳನ್ನು ಅವಲಂಬಿಸಿರುತ್ತದೆ ಮತ್ತು ಶಿಕ್ಷಕ ಕೇಂದ್ರಿತವಾಗಿರುತ್ತದೆ. ಅದರಲ್ಲಿ ವಿದ್ಯಾರ್ಥಿ ಜ್ಞಾನವನ್ನು ಸ್ವೀಕರಿಸಬೇಕು ಮತ್ತು ಆ ಬಗ್ಗೆ ಕೇಳಿದಾಗ ಅಥವಾ ಮೌಲ್ಯಮಾಪನ ಮಾಡುವಾಗ ಬಹಿರಂಗಪಡಿಸಬೇಕು ಎಂಬಂತೆ ವಿದ್ಯಾರ್ಥಿಯನ್ನು ತಟಸ್ಥ ಕಲಿಕಾರ್ಥಿಯಾಗಿ ಪರಿಗಣಿಸಲಾಗಿರುತ್ತದೆ. ಈ ಪ್ರಕ್ರಿಯೆ ನೀರಸವಾದುದಾಗಿರುತ್ತದೆ, ಬಳಲಿಸುವಂಥದ್ದು ಮತ್ತು ಅನಗತ್ಯವಾದ ಪುನರಾವರ್ತನೆಯಿದ್ದು, ಇದರಲ್ಲಿ ಎಲ್ಲಾ ಮಕ್ಕಳೂ ಆಸಕ್ತಿ ವಹಿಸಲಾರರು. ಹಲವು ಮಕ್ಕಳಿಗೆ ತರಗತಿ ಸನ್ನಿವೇಶವು ಪ್ರಪಂಚದ ಬಗೆಗಿನ ಅವರ ಪೂರ್ವಾನುಭವ, ಅವರ ಭಾಷೆ, ಅವರ ಹಿನ್ನೆಲೆ ಯಾವುದೇ ಪ್ರಸ್ತುತತೆಯನ್ನು ಹೊಂದಿರದ ಪರಕೀಯ ಭಾವ ಮೂಡಿಸುತ್ತದೆ ಮತ್ತು ನಿರೀಕ್ಷಿತ ವಸ್ತು ವಿಷಯವನ್ನು, ಅದರ ಅಭಿವ್ಯಕ್ತಿಯನ್ನು ಮತ್ತು ನೆನಪಿರಿಸಿಕೊಳ್ಳುವುದನ್ನು ಅವರು ಕಲಿಯಬೇಕಾಗುತ್ತದೆ. ಈ ವಿಧಾನದಲ್ಲಿ ಬಹುಸಂಖ್ಯೆಯ ಮಕ್ಕಳಿಗೆ ಕಲಿಯಲು ಆಗುವುದಿಲ್ಲ. ಅವರಿಗೆ ಬಹಳ ಬೇಗನೆ ಬುದ್ದುಗಳೆಂದು ಹಣೆಪಟ್ಟಿ ಕಟ್ಟಲಾಗುತ್ತದೆ. ಅಂದರೆ ಕಲಿಕೆಯಲ್ಲಿ 'ಹಿಂದುಳಿದವರು' ಮತ್ತು 'ನಿಧಾನಗತಿಯಲ್ಲಿ ಕಲಿಯುವವರು' ಎಂದು ಅವರನ್ನು

ಪರಿಗಣಿಸಲಾಗುತ್ತದೆ. ಇದು ಅವರು ಶಿಕ್ಷಣದಿಂದ ಇನ್ನಷ್ಟು ದೂರ ಸರಿಯುವಂತೆ ಮಾಡುತ್ತದೆ. ಅವರು ಶಾಲೆಯಿಂದ ಮತ್ತು ಶಿಕ್ಷಣ ವ್ಯವಸ್ಥೆಯಿಂದಲೇ ಹೊರ ನಡೆಯುವುದಕ್ಕೆ ಸಿದ್ಧರಾಗುತ್ತಾರೆ.

ವೈಯಕ್ತಿಕವಾಗಿ ಒಬ್ಬೊಬ್ಬರಿಗೆ ಕಲಿಸುವುದು

ಇನ್ನೊಂದೆಡೆ, ಎಲ್ಲಾ ವಿದ್ಯಾರ್ಥಿಗಳೂ, ಅವರ ಸಾಮರ್ಥ್ಯದ ಮಟ್ಟದಲ್ಲಿಯ ಭಿನ್ನತೆಯ ಹೊರತಾಗಿಯೂ, ಕಲಿಯಬಲ್ಲರು ಎಂದು ನಂಬುವ ಶಿಕ್ಷಕರು, ಮಕ್ಕಳ ವ್ಯಕ್ತಿಗತ ಪ್ರತಿಭೆಯನ್ನು, ಇಷ್ಟಪಡುವುದನ್ನು ಮತ್ತು ಇಷ್ಟಪಡದೆ ಇರುವುದನ್ನು, ಕಲಿಕಾ ಶೈಲಿಗಳನ್ನು, ಸವಾಲುಗಳನ್ನು, ಸಾಮಾಜಿಕ ಆರ್ಥಿಕ ಹಿನ್ನೆಲೆಯನ್ನು ಮತ್ತು ತಮ್ಮ ತರಗತಿಯ ಪ್ರತಿ ವಿದ್ಯಾರ್ಥಿಯ ಕಲಿಕಾ ಅವಶ್ಯಕತೆಗಳನ್ನು ಗುರುತಿಸುವುದಕ್ಕೆ ಬಹಳ ಗಮನ ಕೊಡುತ್ತಾರೆ. ಈ ಶಿಕ್ಷಕರು ವಿದ್ಯಾರ್ಥಿಗಳ ಜೊತೆ ಉತ್ತಮ ಮತ್ತು ಆತ್ಮೀಯ ಸಂಬಂಧವನ್ನು ಹೊಂದಿರುವುದು ಕಾಣುತ್ತದೆ. ಅವರು ಪ್ರತಿ ವಿದ್ಯಾರ್ಥಿಯ ಭಿನ್ನ ದೃಷ್ಟಿಕೋನಗಳಿಗೆ ಮತ್ತು ಅಭಿಪ್ರಾಯಗಳಿಗೆ ಮುಕ್ತವಾಗಿರುತ್ತಾರೆ. ಈ ಶಿಕ್ಷಕರಿಗೆ ಕಲಿಕೆಯ ಅರ್ಥ ಎಂಬುದು ಪರಿಕಲ್ಪನೆಗಳನ್ನು ಕಂಠಪಾಠ ಮಾಡಿಕೊಳ್ಳುವುದಕ್ಕೆ ಸೀಮಿತವಾಗಿರುವುದಿಲ್ಲ. ಅವರಿಗೆ ಒಂದು ನಿರ್ದಿಷ್ಟ ತರಗತಿಗೆ ನಿಗದಿಯಾದ ಗರಿಷ್ಟ ಕಲಿಕಾ ಉದ್ದೇಶಗಳ ಬಗ್ಗೆ ಅರಿವಿರುತ್ತದೆ. ಅವರು ವಿದ್ಯಾರ್ಥಿಗಳ ಸಾಮರ್ಥ್ಯಗಳಿಗೆ ಒತ್ತು ಕೊಡುತ್ತಾರಲ್ಲದೆ ಪಠ್ಯದ ವಿಷಯಗಳಿಗೆ ಅಲ್ಲ.

ಈ ಶಿಕ್ಷಕರು ಸಾಮಾನ್ಯವಾಗಿ, ವಿಭಿನ್ನ ಸೂಚನೆಗಳನ್ನು, ವಿವಿಧ ಉದಾಹರಣೆಗಳನ್ನು, ವೈಯುಕ್ತಿಕ ವಿದ್ಯಾರ್ಥಿಗಳಿಗೆ ಅಥವಾ ವಿದ್ಯಾರ್ಥಿ ಗುಂಪುಗಳಿಗೆ ಚಟುವಟಿಕೆಗಳನ್ನು ವಿನ್ಯಾಸ ಮಾಡಿ ಬಳಸುತ್ತಾರೆ. ಅವರು ಇಡೀ ತರಗತಿಗೆ ಒಂದೇ ವಿಧಾನದಲ್ಲಿ ಕಲಿಸುವುದಿಲ್ಲ. ಒಂದು ಸಲ ನಡೆಸುವ ಸಂಕಲನಾತ್ಮಕ ಮೌಲ್ಯಮಾಪನವು ಒಬ್ಬ ವಿದ್ಯಾರ್ಥಿಯು ಒಂದು ಶೈಕ್ಷಣಿಕ ವರ್ಷದಲ್ಲಿ ಗಳಿಸಿರಬಹುದಾದ ಎಲ್ಲಾ ಸಾಮರ್ಥ್ಯಗಳನ್ನೂ ತೋರಿಸಿಕೊಡದು ಎಂಬುದನ್ನೂ ತಿಳಿದಿರುತ್ತಾರೆ. ಬದಲಾಗಿ ಅವರು, ಮೌಲ್ಯಮಾಪನವು ಶಿಕ್ಷಕರ i ಕಲಿಕೆಗಾಗಿ ಇರುವುದು ಎಂಬಂತೆ ನೋಡುತ್ತಾರೆ. ಅದು ವಿದ್ಯಾರ್ಥಿಗಳ ಕಲಿಕೆಯಲ್ಲಿ ಉಂಟಾಗಿರುವ ಅಂತರವನ್ನು ಗುರುತಿಸುವ ಕಡೆಗೆ ಗಮನ ನೀಡುವುದಕ್ಕೆ ಮತ್ತು ಮುಂದಿನ ಬೋಧನೆಗೆ ಹೊಸ ಯೋಜನೆ ತಯಾರಿಗೆ ಸಹಾಯ ಮಾಡುವುದಕ್ಕೆ ಇರುವುದು ಎಂದು ಶಿಕ್ಷಕರು ಭಾವಿಸುತ್ತಾರೆ. ಅದೇ ವೇಳೆ ಅವರು ತಾವು ಇನ್ನೂ ಕಲಿಯಬೇಕಿರುವ ಅಗತ್ಯವನ್ನು ತಿಳಿದುಕೊಳ್ಳಲು ನೆರವಾಗುವುದರಿಂದ ವಿದ್ಯಾರ್ಥಿಗಳಿಗೆ ಅದು ಸ್ವಮೌಲ್ಯಮಾನಕ್ಕೂ ಒಂದು ಸಾಧನವಾಗುತ್ತದೆ. ಅಂತಹ ಮೌಲ್ಯಮಾಪನವು ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ಕಲಿಕೆಯ ಅಗತ್ಯಗಳನ್ನು ಗುರುತಿಸುವ ಅವಕಾಶಗಳನ್ನು ಒಳಗೊಂಡ ರೂಪಣಾತ್ಮಕ ಮೌಲ್ಯಮಾಪನದ ರೀತಿಯದ್ದಾಗಿರುತ್ತದೆ.

ಇಂತಹ ಹಲವು ಅಭ್ಯಾಸಗಳು ಡೆಹರಾಡೂನಿನ ವಿಕಾಸನಗರ ಬ್ಲಾಕಿನ ಸರಕಾರಿ ಶಾಲೆಗಳಲ್ಲಿ ನಡೆಯುತ್ತಿವೆ ಎಂಬುವುದನ್ನು 2018–19ರಲ್ಲಿ ನಡೆದ ಪೊತಾಲೀ ಗ್ರಂಥಾಲಯ ಕಾರ್ಯಕ್ರಮದ ವೇಳೆ 28 ಶಾಲೆಗಳ ಶಿಕ್ಷಕರು ಸ್ವಯಂಪ್ರೇರಣೆಯಿಂದ ಭಾಗವಹಿಸುವುದಕ್ಕೆ ಮುಂದೆ ಬಂದಾಗ ಗಮನಿಸಲಾಯಿತು. ಆ ಕಾರ್ಯಕ್ರಮದ ವೇಳೆ ಪುರಾವೆಯಾಗಿ ಹಲವಾರು ನಿರೂಪಣೆಗಳು ಕೇಳಿಬಂದವು. ಅವು, ವಿದ್ಯಾರ್ಥಿಗಳ ಕಲಿಕಾ ಮಟ್ಟದಲ್ಲಿ ಸುಧಾರಣೆ ಆಗಿದೆ, ಮತ್ತು ಅವರಿಗೆ ಓದುವುದು ಅಥವಾ ಬರೆಯುವುದು ಬಾರದ ವಿದ್ಯಾರ್ಥಿಗಳಲ್ಲಿ ಗಣನೀಯ ಬದಲಾವಣೆಗಳು ಆಗಿವೆ. ಅವರಲ್ಲಿ ಪುಸ್ತಕಗಳ ಕುರಿತು ಆಸಕ್ತಿ ಬೆಳೆದಿದೆ ಎಂಬಂತಹ ಕಥನಗಳಾಗಿದ್ದವು. ಆರಂಭದಲ್ಲಿ, ಅವರು ಪುಸ್ತಕದಲ್ಲಿರುವ ಚಿತ್ರಗಳನ್ನು ನೋಡುವುದರಲ್ಲಷ್ಟೇ ಖುಷಿ ಅನುಭವಿಸುತ್ತಿದ್ದವರು ಮುಂದೆ ಆ ಮಕ್ಕಳು ಓದುವುದನ್ನು ಮತ್ತು ಬರೆಯುವುದನ್ನು ಕಲಿಯುವ ಕಡೆಗೂ ಆಸಕ್ತಿ ತೋರಿದರು ಮತ್ತು ಇಂತಹ ಸಾಮರ್ಥ್ಯಗಳನ್ನು ಬೆಳೆಸಿಕೊಂಡಿದ್ದಾರೆ ಎಂಬುದು ಸಹ ಇಲ್ಲಿ ಸ್ಪಷ್ಟವಾಯಿತು. ಶಾಲೆಯಲ್ಲಿ ಶಿಕ್ಷಕರಿಗೆ ಮಗು ಕೇಂದ್ರಿತ ಅಭ್ಯಾಸಗಳ ಬಗ್ಗೆ ಶಿಕ್ಷಣಶಾಸ್ತ್ರದ ಪ್ರಾತ್ಯಕ್ಷಿಕೆಯ ಆಕರಗಳ ಬೆಂಬಲ ಸಿಕ್ಕರೆ ಮತ್ತು ಸಾಕಷ್ಟು ಉತ್ತಮವಾದ ಮಕ್ಕಳ ಸಾಹಿತ್ಯ ಲಭಿಸಿದರೆ ವಿದ್ಯಾರ್ಥಿಗಳ ಕಲಿಕಾ ಮಟ್ಟದಲ್ಲಿ ನಿರೀಕ್ಷಿತ ಬದಲಾವಣೆಯನ್ನು ತರಬಹುದು ಎಂಬ ಊಹೆಯ ಮೇಲೆ ಈ ಕಾರ್ಯಕ್ರಮವು ನಿಂತಿದೆ. ಒಂದು ತರಗತಿಯೊಳಗಿನ ಎಲ್ಲಾ ಮಕ್ಕಳೂ, ಅವರ ಕಲಿಯುವ ಸಾಮರ್ಥ್ಯದ ವೈವಿಧ್ಯತೆಯ ಹೊರತಾಗಿಯೂ, ಪರಿಣಾಮ–ಕಾರಿಯಾಗಿ ಕಲಿಯಬಲ್ಲರು ಎಂಬುದನ್ನು ಖಾತರಿಪಡಿಸುವುದೇ ಈ ಕಾರ್ಯಕ್ರಮದ ಕೇಂದ್ರ ಗಮನವಾದ 'ವೈಯಕ್ತಿಕ ಅವಶ್ಯಕ ಬೋಧನೆ iiಯನ್ನು (Differentiated instruction) ಉತ್ತೇಜಿಸುವುದಾಗಿತ್ತು. ಈ ಕಾರ್ಯಕ್ರಮದ ವಿನ್ಯಾಸವು ಶಿಕ್ಷಕರಿಗೆ ತಮ್ಮ ಅಭ್ಯಾಸಗಳನ್ನು ಅವಲೋಕಿಸಲು ಮತ್ತು ಪ್ರತಿಬಿಂಬಿಸಲು ಅವಕಾಶ ಕೊಡುವಂತೆ ಇತ್ತು.

ಫಲಿತಾಂಶದ ವಿಶ್ಲೇಷಣೆ

ಶಿಕ್ಷಕರ ಜೊತೆಗಿನ ಸಭೆಗಳಲ್ಲಿ ದಾಖಲಿಸಿಕೊಂಡ ಅವರ ಚಿಂತನೆಗಳನ್ನು, ಬೋಧನೆಯ ವಿವರಗಳನ್ನು ಮತ್ತು ಅಭಿಪ್ರಾಯಗಳನ್ನು ವಿಶ್ಲೇಷಿಸಿದಾಗ, ನಮಗೆ ಭಾಷಾ ಬೋಧನಾ ಕಾರ್ಯಕ್ರಮದ ಕೇಂದ್ರ ಗಮನ ಏನಿರಬೇಕು ಎಂಬ ಸ್ಪಷ್ಟವಾದ ಕಲ್ಪನೆ ಸಿಕ್ಕಿತು.

ಕಾಯಕ್ರಮಗಳ ಅನುಷ್ಠಾನದ ಅವಧಿಯಲ್ಲಿ ಎಲ್ಲಾ ಮಕ್ಕಳೂ ತಮ್ಮದೇ ಗತಿಯಲ್ಲಿ ಮತ್ತು ತಮ್ಮದೇ ಹಾದಿಯಲ್ಲಿ ಕಲಿಯುವ ಯೋಜನೆಗಳಿಗೆ ನೆರವಾಗಬಹುದಾದಂಥ ಒಳನೋಟಗಳುಳ್ಳ ಕೆಲವು ಆಧಾರ ಸ್ವರೂಪದ ತತ್ವಗಳು ಹೊರಹೊಮ್ಮಿದವು. ಈ ತತ್ವಗಳನ್ನು ಈ ಕೆಳಗಿನಂತೆ ಕ್ರೋಢೀಕರಿಸಬಹುದು:

1. ಇಂತಹ ಕಾರ್ಯಕ್ರಮಗಳು ಶಿಕ್ಷಕರಿಗೆ ಏನನ್ನು ಕಲಿಸಬೇಕು ಮತ್ತು ಅದನ್ನು ಏಕೆ ಕಲಿಸಬೇಕು ಎಂಬ ಅಂಶಗಳ ಕುರಿತು ಮಾರ್ಗದರ್ಶನ ಮಾಡಬೇಕು. ಶಿಕ್ಷಕರಿಗೆ ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ ಸರಿಹೊಂದುವ ಅವರದೇ ಆದ ತರಗತಿ ಪ್ರಕ್ರಿಯೆಗಳನ್ನು ಬೆಳೆಸಿಕೊಳ್ಳಲು ಅವಶ್ಯಕ ಬೆಂಬಲ ಮತ್ತು ಮಾರ್ಗದರ್ಶನವನ್ನು ಒದಗಿಸಬೇಕು.

2. ಪ್ರತಿ ಮಗುವೂ ಕಲಿಯುತ್ತದೆ ಎಂಬ ವಿಷಯ ಬಹಳ ಸ್ಪಷ್ಟವಾಗಿದೆ. ಆದರೆ ಒಂದು ಸಾಮಾನ್ಯವಾದ ಬೋಧನಾ ವಿಧಾನ ಎಲ್ಲಾ ಮಕ್ಕಳ ವಿವಿಧ ಕಲಿಕಾ ಅವಶ್ಯಕತೆಗಳನ್ನು ಪೂರೈಸದು ಅಥವಾ ಅದು ಒಂದೇ ತರಗತಿಯ ವಿವಿಧ ವಿದ್ಯಾರ್ಥಿಗಳ ವಿವಿಧ ಕಲಿಕಾ ಶೈಲಿಗಳಿಗೆ ಮತ್ತು ಪ್ರಕ್ರಿಯೆಗಳಿಗೆ ಹೊಂದಿಕೊಳ್ಳಲಾರದು.

3. 'ವೈಯಕ್ತಿಕ ಅವಶ್ಯಕ ಬೋಧನಾ ವಿಧಾನ', ಗ್ರಾಮೀಣ ಪ್ರದೇಶಗಳ ಸರಕಾರೀ ಶಾಲೆಗಳಲ್ಲಿ ಸದ್ಯ ಇರುವ ಬಹುವರ್ಗ ಮತ್ತು ಬಹುಹಂತದ ಬೋಧನಾ ಪರಿಸ್ಥಿತಿಗಳಿಗೆ ಅತ್ಯುತ್ತಮವಾಗಿ ಹೊಂದಾಣಿಕೆ ಆಗುತ್ತದೆ.

4. ವಯೋಮಾನಕ್ಕೆ ಅನುಸಾರವಾದ ಮತ್ತು ಸಾಕಷ್ಟು ಸಂಖ್ಯೆಯ, ಬೇರೆಬೇರೆ ಪ್ರಕಾರದ ಪಠ್ಯಗಳು, ಉದಾಹರಣೆಗೆ ಕಥೆಗಳು, ಕವನಗಳು, ನಾಟಕಗಳು– ಓದುವುದು ಮತ್ತು ಬರೆಯುವುದರಲ್ಲಿ ಮಕ್ಕಳ ಆಸಕ್ತಿಯನ್ನು ಕುದುರಿಸುತ್ತವೆ. ಆದರೆ ಈ ಆಸಕ್ತಿಯನ್ನು ಹಿಂಬಾಲಿಸಿ ವಿದ್ಯಾರ್ಥಿಗಳಿಗೆ ವೈಯುಕ್ತಿಕವಾದ ಬೋಧನೆ ಮತ್ತು ಬೆಂಬಲ ಶಿಕ್ಷಕರ ಕಡೆಯಿಂದ ಒದಗಿ ಬರಬೇಕು. ಯಾಕೆಂದರೆ ಅವರ ಆಸಕ್ತಿಯಿಂದ ಮಾತ್ರ ಓದುವುದನ್ನು ಮತ್ತು ಬರೆಯುವುದನ್ನು ಕಲಿಯುವುದಕ್ಕೆ ಸಾಧ್ಯ ಆಗಲಾರದು.

5. ಶಿಕ್ಷಕರು ಹೊಸ ದೃಷ್ಟಿಕೋನ ಮತ್ತು ವಿಧಾನಗಳನ್ನು ಕಲಿಯುವುದಕ್ಕೆ ಸಿದ್ಧವಿದ್ದಾರೆ. ಆದರೆ ಅವರ ದಿನನಿತ್ಯದ ತರಗತಿ ಬೋಧನೆ ವೇಳೆ ಎದುರಾಗುವ ಸವಾಲುಗಳನ್ನು ಮತ್ತು ಸನ್ನಿವೇಶಗಳನ್ನು ನಿರ್ವಹಿಸಲು ತಾತ್ವಿಕ ಉಪನ್ಯಾಸಗಳು ಸಹಾಯ ಮಾಡಲಾರವು. ಸಂಪನ್ಮೂಲ ವ್ಯಕ್ತಿಗಳು ಕಡ್ಡಾಯವಾಗಿ ತರಗತಿಗಳಿಗೆ ಭೇಟಿ ಕೊಡಬೇಕು ಮತ್ತು ಶಿಕ್ಷಕರ ಜೊತೆ ಸಮಯ ಕಳೆಯಬೇಕು. ನಿಜವಾದ ತರಗತಿ ಸನ್ನಿವೇಶಗಳಲ್ಲಿ ಬಳಕೆಗೆ ಯೋಗ್ಯವಾದ ಪರಿಹಾರೋಪಾಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಶಿಕ್ಷಕರಿಗೆ ನೆರವಾಗಬೇಕು.

ದಂಡಾಜಂಗಲ್‌ನ ಪ್ರಾಥಮಿಕ ಶಾಲೆಯಲ್ಲಿ ಚುಟುಕು ಸಂಭಾಷಣೆ ನಡೆದ ಒಂದು ತಿಂಗಳ ನಂತರ, ದೀಕ್ಷಾಳ ಶಿಕ್ಷಕಿ ತಮ್ಮ ಗುಂಪಿನಲ್ಲಿ, ಒಂದು ವಿಡಿಯೋವನ್ನು ಹಂಚಿಕೊಂಡರು. ದೀಕ್ಷಾ ತನ್ನ ಪಾಠ ಪುಸ್ತಕದ ಒಂದು ಕಥೆಯನ್ನು ವಿಮರ್ಶಿಸಿದ್ದು ನೋಡಿ ನನಗೆ ರೋಮಾಂಚನವಾಯಿತು. ಆಕೆ ಕಥೆ ಮುಂದುವರೆದ ರೀತಿಯನ್ನು, ಪಾತ್ರಗಳನ್ನು ಮತ್ತು ಅವಳಿಗೆ ಏನು ಇಷ್ಟವಾಯಿತು ಮತ್ತು ಏನು ಇಷ್ಟ ಆಗಲಿಲ್ಲ ಎಂಬುದನ್ನು ಚರ್ಚಿಸಿದ್ದಳು. ಆ ಕಥೆಯ ನಾಯಕನಂತೆ ತಾನು ಮಾತ್ರ ಯಾರನ್ನೂ ನೋಯಿಸುವುದಿಲ್ಲ ಎಂದೂ ಹೇಳಿದ್ದಳು. ಇದು ನಾವು ಸಾಮಾನ್ಯವಾಗಿ ಓದುವ ವಿಮರ್ಶೆಗಳ ರೀತಿಯಲ್ಲಿ ಇಲ್ಲದೆ ಇರಬಹುದು. ಆದರೂ ಅದು ಕಥೆಯ ಬಗ್ಗೆ ಯೋಚನೆ ಮಾಡಿದ ವಿದ್ಯಾರ್ಥಿನಿಯೊಬ್ಬಳ ಚಿಂತನೆಗಳನ್ನು ತೋರಿಸಿಕೊಡುತ್ತದೆ. ಅದು ಅವಳದೇ ದೃಷ್ಟಿಕೋನಗಳನ್ನು ಹೊಂದಿದೆ ಮತ್ತು ಅದನ್ನು ಅವಳು ಅವಳದೇ ರೀತಿಯಲ್ಲಿ (ಇದನ್ನು 'ಸ್ವಂತಿಕೆಯ ಮತ್ತು ಹೊರಗಿನ ಒತ್ತಡಗಳಿಂದ ಭ್ರಷ್ಟವಾಗದಿರುವ' ಎಂದು ನೋಡಬೇಕು) ವ್ಯಕ್ತಪಡಿಸಿದ್ದಾಳೆ.

ಅಂತಹ ಅನುಭವಗಳು ಮತ್ತು ಉದಾಹರಣೆಗಳು ಪ್ರತಿ ಮಗುವೂ ಕಲಿಯಬಲ್ಲದು ಎಂಬ ಶಿಕ್ಷಕರ ಮತ್ತು ಶಿಕ್ಷಕ ಶಿಕ್ಷಕರ ನಂಬಿಕೆ ಮತ್ತು ಬದ್ಧತೆಗಳನ್ನು ಹೆಚ್ಚಿಸುತ್ತವೆ. ಅಂತಹ ಸಾಧನೆಗೆ ಶಿಕ್ಷಕರ ಕಡೆಯಿಂದ ಬೇಕಾಗಿರುವುದು ಪ್ರತಿ ಮಗುವನ್ನೂ ಒಬ್ಬ ವ್ಯಕ್ತಿಯಾಗಿ ಆದರಿಸುವುದು ಮತ್ತು ಕಲಿಕಾರ್ಥಿಯ ಅವಶ್ಯಕತೆಗಳಿಗೆ ಅನುಗುಣವಾಗಿ ವ್ಯಕ್ತಿಗತ ಬೆಂಬಲಗಳನ್ನು ಒದಗಿಸುವುದೇ ಆಗಿದೆ.

ಆಕರಗಳು ಮತ್ತು ಹೆಚ್ಚಿನ ಓದಿಗಾಗಿ

1 *The Learning, Teaching and Assessment Guide*, Chapter 3, http://www.ltag.education.tas.gov.au

2 *The Differentiated Classroom*: Carol Ann Tomlinson



ವರ್ತುಲ್ ದೌಂಡಿಯಾಲ್ ಅವರು ಡೆಹ್ರಾಡೂನ್‌ನಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ, ಹಿಂದಿ ಭಾಷೆಯ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಅವರು ಪ್ರಥಮ್ ಮತ್ತು 'ರೂಮ್ ಟು ರೀಡ್'ನಂತಹ ಸಂಸ್ಥೆಗಳಲ್ಲೂ ಕೆಲಸ ಮಾಡಿದ್ದಾರೆ. ಹಿಸ್ಟರಿ ಚಾನಲ್‌ನ ವಿಷಯ ಸಂಪಾದಕರಾಗಿಯೂ ಕರ್ತವ್ಯ ನಿರ್ವಹಿಸಿದ್ದು, ತತ್ವಶಾಸ್ತ್ರ ಮತ್ತು ಸಂಶೋಧನೆಯಲ್ಲೂ ಆಸಕ್ತರಾಗಿದ್ದಾರೆ. ಅವರನ್ನು ಮುಂದಿನ ಮೇಲ್ ಐಡಿಯಲ್ಲಿ ಸಂಪರ್ಕಿಸಬಹುದು: vartul.dhaundiyal@azimpremjifoundation.org

ಅನುವಾದ: **ರಾಮಕೃಷ್ಣ ಭಟ್** । ಪರಿಶೀಲನೆ: **ಲತಾ ಕೆ ಸಿ**